**All India Radio: Bangalore**
**National Bulletin In Kannada**
**22.03.2026 1.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**22.03.2026 1.10 p.m.**
**<><><><>**

ಮುಖ್ಯಾಂಶಗಳು

1. ಕರ್ನಾಟಕದ ನವ ಮಂಗಳೂರು ಬಂದರು ತಲುಪಿದ ರಷ್ಯಾದ ಅಕ್ವಾ ಟೈಟಾನ್ ಹೆಸರಿನ ಕಚ್ಛಾ ತೈಲ ಹೊತ್ತ ಬೃಹತ್ ಹಡಗು
2. ದೇಶದಲ್ಲಿ ಚುನಾಯಿತ ಸರ್ಕಾರದ ಅತಿ ಹೆಚ್ಚು ಕಾಲ ಮುಖ್ಯಸ್ಥರಾಗುವ ಮೂಲಕ ರಾಜಕೀಯ ಕ್ಷೇತ್ರದಲ್ಲಿ ಐತಿಹಾಸಿಕ ಮೈಲಿಗಲ್ಲು ಸಾಧಿಸಿದ ಪ್ರಧಾನಿ ನರೇಂದ್ರ ಮೋದಿ
3. ಪಶ್ಚಿಮ ಏಷ್ಯಾದ ಅನೇಕ ದೇಶಗಳಲ್ಲಿ ನಾಗರಿಕರು, ಪ್ರಮುಖ ಮೂಲಸೌಕರ್ಯಗಳ ಮೇಲಿನ ಇರಾನ್ ದಾಳಿ ಖಂಡಿಸಿದ ಜಿ೭ ರಾಷ್ಟ್ರಗಳು
4. ಇಂಡಿಯನ್ ಓಪನ್ - ಪಿಎಸ್‌ಎ ಸ್ಕ್ವಾಷ್; ಪುರುಷರ ಫೈನಲ್‌ನಲ್ಲಿಂದು ವೀರ್ ಚೋತ್ರಾನಿ-ಅಭಯ್ ಸಿಂಗ್ ಮುಖಾಮುಖಿ

<><><><>

ಮಧ್ಯಪ್ರಾಚ್ಯ ದೇಶಗಳಲ್ಲಿನ ಸಂಘರ್ಷದ ನಡುವೆ ರಷ್ಯಾದಿಂದ ಚೀನಾಕ್ಕೆ ಹೊರಟಿದ್ದ ಅಕ್ವಾ ಟೈಟಾನ್ ಹೆಸರಿನ ಕಚ್ಛಾ ತೈಲ ಹೊತ್ತ ಬೃಹತ್ ಹಡಗು ನಿನ್ನೆ ರಾತ್ರಿ ಕರ್ನಾಟಕದ ನವ ಮಂಗಳೂರು ಬಂದರಿಗೆ ಆಗಮಿಸಿದೆ. ಜಾಗತಿಕ ಇಂಧನ ಬೆಲೆಗಳನ್ನು ಸ್ಥಿರಗೊಳಿಸುವ ಪ್ರಯತ್ನದಲ್ಲಿ ಈಗಾಗಲೇ ಸಮುದ್ರದಲ್ಲಿ ಸಿಲುಕಿರುವ ರಷ್ಯಾದ ಕಚ್ಚಾ ತೈಲವನ್ನು ಮಾರಾಟ ಮಾಡಲು ಅಮೆರಿಕ ಗುರುವಾರ ತಾತ್ಕಾಲಿಕ ಸಾಮಾನ್ಯ ಪರವಾನಗಿ ನೀಡಿದ ನಂತರ ಈ ಹಡಗು ಬಂದಿದೆ. ಈ ಹಡಗಿನಿಂದ ೯೭ ಸಾವಿರ ಮೆಟ್ರಿಕ್ ಟನ್ ನಷ್ಟು ಕಚ್ಛಾ ತೈಲವನ್ನು ಎಂಆರ್‌ಪಿಎಲ್ ತೈಲ ಸಂಸ್ಕರಣಾ ಘಟಕಕ್ಕೆ ಅನ್‌ಲೋಡ್ ಮಾಡುವ ಕಾರ್ಯ ಇಂದು ನಡೆಯುತ್ತಿದೆ. ಅಮೆರಿಕದಿಂದ ದ್ರವೀಕೃತ ಪೆಟ್ರೋಲಿಯಂ ಅನಿಲ ಎಲ್‌ಪಿಜಿ ಸಾಗಿಸುವ ಮತ್ತೊಂದು ಸರಕು ಹಡಗು ಮಂಗಳೂರು ಬಂದರಿಗೆ ಆಗಮಿಸಿದೆ. ಅಮೆರಿಕದ ಟೆಕ್ಸಾಸ್ ರಾಜ್ಯದಿಂದ ಎಲ್‌ಪಿಜಿ ಸಾಗಿಸುವ ಪಿಕ್ಸಿಸ್ ಪಯೋನೀರ್ ಸರಕು ಹಡಗು ಬಂದರಿಗೆ ಯಶಸ್ವಿಯಾಗಿ ತಲುಪಿದೆ. ಇದಕ್ಕೂ ಮೊದಲು, ಭಾರತೀಯ ಧ್ವಜ ಹೊತ್ತ ಎಲ್‌ಪಿಜಿ ಟ್ಯಾಂಕರ್ 'ನಂದಾ ದೇವಿ' ಗುಜರಾತ್‌ನ

ವಾಡಿನಾರ್ ಬಂದರಿಗೆ ಆಗಮಿಸಿತ್ತು. 'ಶಿವಾಲಿಕ್' ಮುಂದ್ರಾ ಬಂದರಿನಲ್ಲಿ ಬಂದಿಳಿದ ನಂತರ ಈ ವಾರ ಪಶ್ಚಿಮ ಕರಾವಳಿಯನ್ನು ತಲುಪಿದ ಎರಡನೇ ಎಲ್‌ಪಿಜಿ ವಾಹಕವಾಗಿದೆ.

<><><><>

ಪ್ರಧಾನಿ ನರೇಂದ್ರ ಮೋದಿ ಅವರು ದೇಶದಲ್ಲಿ ಚುನಾಯಿತ ಸರ್ಕಾರದ ಅತಿ ಹೆಚ್ಚು ಕಾಲ ಮುಖ್ಯಸ್ಥರಾಗುವ ಮೂಲಕ ಭಾರತೀಯ ರಾಜಕೀಯವಾಗಿ ಐತಿಹಾಸಿಕ ಮೈಲಿಗಲ್ಲು ಸಾಧಿಸಿದ್ದಾರೆ. ಇದರೊಂದಿಗೆ, ಸಿಕ್ಕಿಂನ ಮುಖ್ಯಮಂತ್ರಿಯಾಗಿ ೮ ಸಾವಿರದ ೯೩೦ ದಿನಗಳ ಕಾಲ ಅಧಿಕಾರದಲ್ಲಿದ್ದ ಪವನ್ ಕುಮಾರ್ ಚಾಮ್ಲಿಂಗ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಹಿಂದಿಕ್ಕಿದ್ದಾರೆ. ಗುಜರಾತ್ ಮುಖ್ಯಮಂತ್ರಿಯಾಗಿ ಮತ್ತು ಪ್ರಧಾನಿಯಾಗಿ ತಮ್ಮ ಅಧಿಕಾರಾವಧಿಯನ್ನು ಒಟ್ಟುಗೂಡಿಸಿ, ಅವರು ಪ್ರಸ್ತುತ ಒಟ್ಟು ೮ ಸಾವಿರದ ೯೩೧ ದಿನಗಳನ್ನು ಸರ್ಕಾರದ ಮುಖ್ಯಸ್ಥರಾಗಿ ಪೂರೈಸಿದ್ದಾರೆ. ಈ ಮೂಲಕ ನಾಯಕತ್ವದ ಹಾದಿಯುಲ್ಲಿ ತಮ್ಮ ೨೫ನೇ ವರ್ಷವನ್ನು ಪ್ರವೇಶಿಸಿದ್ದಾರೆ. ಇದು ದಶಕಗಳ ನಿರಂತರ ಸಾರ್ವಜನಿಕ ಸೇವೆ ಮತ್ತು ಉನ್ನತ ಮಟ್ಟದಲ್ಲಿ ರಾಜಕೀಯ ನಾಯಕತ್ವವನ್ನು ಪ್ರತಿಬಿಂಬಿಸುತ್ತದೆ. ತಮ್ಮ ವೃತ್ತಿಜೀವನದ ಅವಧಿಯಲ್ಲಿ, ಅತಿ ಹೆಚ್ಚು ಕಾಲ ಗುಜರಾತ್ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ಮತ್ತು ಮುಖ್ಯಮಂತ್ರಿಯಾಗಿ ದೀರ್ಘ ಅನುಭವ ಹೊಂದಿರುವ ಪ್ರಧಾನಿ ಸೇರಿದಂತೆ ಹಲವಾರು ಗಮನಾರ್ಹ ದಾಖಲೆಗಳನ್ನು ನರೇಂದ್ರ ಮೋದಿ ಸ್ಥಾಪಿಸಿದ್ದಾರೆ. ೨೦೧೪, ೨೦೧೯ ಮತ್ತು ೨೦೨೪ ರಲ್ಲಿ ಸತತ ಮೂರು ಲೋಕಸಭಾ ಚುನಾವಣೆಗಳಲ್ಲಿ ಗೆಲುವು ಸಾಧಿಸಿದ್ದಾರೆ. ಅಕ್ಟೋಬರ್ ೭, ೨೦೦೧ ರಂದು ನರೇಂದ್ರ ಮೋದಿ ಗುಜರಾತ್ ಮುಖ್ಯಮಂತ್ರಿಯಾಗಿ ಮೊದಲು ಅಧಿಕಾರ ವಹಿಸಿಕೊಂಡರು ಮತ್ತು ಮೇ ೨೧, ೨೦೧೪ ರವರೆಗೆ ಆ ಹುದ್ದೆಯಲ್ಲಿ ಮುಂದುವರೆದರು. ೧೩ ವರ್ಷಗಳಿಗೂ ಹೆಚ್ಚು ಕಾಲ ರಾಜ್ಯವನ್ನು ಮುನ್ನಡೆಸಿದರು ಮತ್ತು ನಂತರ ರಾಷ್ಟ್ರೀಯ ರಾಜಕೀಯಕ್ಕೆ ತೆರಳಿದರು. ಮೇ ೨೬, ೨೦೧೪ ರಂದು ಅವರು ಭಾರತದ ೧೪ ನೇ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದರು, ಲೋಕಸಭೆಯಲ್ಲಿ ಪೂರ್ಣ ಬಹುಮತ ಪಡೆದ ಮೊದಲ ಕಾಂಗ್ರೆಸ್ಸೇತರ ಪ್ರಧಾನಿಯಾದರು. ನಂತರ ಅವರು ಎರಡು ಪೂರ್ಣ ಅವಧಿಗಳನ್ನು ಪೂರ್ಣಗೊಳಿಸಿದ ಮತ್ತು ಸತತ ಮೂರನೇ ಅವಧಿಗೆ ಮರಳಿದ ಮೊದಲ ಕಾಂಗ್ರೆಸ್ಸೇತರ ಪ್ರಧಾನಿಯಾದರು. ಈ ಮೈಲಿಗಲ್ಲಿನ ಜೊತೆಗೆ, ಪ್ರಧಾನಿ ನರೇಂದ್ರ ಮೋದಿ ಈ ವರ್ಷ ಹಲವಾರು ಇತರ ಮಹತ್ವದ ಮಾನದಂಡಗಳನ್ನು ದಾಟಿದ್ದಾರೆ, ವಿಶೇಷವಾಗಿ ಡಿಜಿಟಲ್ ಕ್ಷೇತ್ರದಲ್ಲಿ. ಈ ತಿಂಗಳ ಆರಂಭದಲ್ಲಿ, ಅವರು ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ೩೦ ದಶಲಕ್ಷ ಚಂದಾದಾರರನ್ನು

ತಲುಪಿದರು. ವೇದಿಕೆಯಲ್ಲಿ ಹೆಚ್ಚು ಅನುಸರಿಸುವ ಜಾಗತಿಕ ನಾಯಕರಲ್ಲಿ ಒಬ್ಬರಾಗಿ ತಮ್ಮ ಸ್ಥಾನವನ್ನು ಬಲಪಡಿಸಿಕೊಂಡಿದ್ದಾರೆ. ಫೆಬ್ರವರಿಯಲ್ಲಿ, ಅವರು ಇನ್‌ಸ್ಟಾಗ್ರಾಮ್‌ನಲ್ಲಿ ೧೦೦ ದಶಲಕ್ಷ ಅನುಯಾಯಿಗಳನ್ನು ದಾಟಿದರು, ವೇದಿಕೆಯಲ್ಲಿ ಮೈಲಿಗಲ್ಲು ಸಾಧಿಸಿದ ಮೊದಲ ವಿಶ್ವ ನಾಯಕ ಮತ್ತು ರಾಜಕಾರಣಿಯಾಗಿದ್ದಾರೆ. ಅವರು ಪ್ರಸ್ತುತ ಸಾಮಾಜಿಕ ಮಾಧ್ಯಮ ವೇದಿಕೆಯಲ್ಲಿ ೧೦೧ ದಶಲಕ್ಷ ಅನುಯಾಯಿಗಳನ್ನು ಹೊಂದಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ  ಪ್ರಧಾನಿ ನರೇಂದ್ರ ಮೋದಿ ೧೦೬.೪ ದಶಲಕ್ಷ ಅನುಯಾಯಿಗಳನ್ನು ಹೊಂದಿದ್ದಾರೆ.

<><><><>

ಪಶ್ಚಿಮ ಏಷ್ಯಾದ ಅನೇಕ ದೇಶಗಳಲ್ಲಿ ನಾಗರಿಕರು ಮತ್ತು ಪ್ರಮುಖ ಮೂಲಸೌಕರ್ಯಗಳ ಮೇಲೆ ಇರಾನ್ ನಡೆಸಿದ ದಾಳಿಯನ್ನು ಏಳು ರಾಷ್ಟ್ರಗಳ ಗುಂಪು-ಜಿ೭ ತೀವ್ರವಾಗಿ ಖಂಡಿಸಿದೆ. ಕೆನಡಾ, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ಯುಕೆ ಮತ್ತು ಅಮೆರಿಕವನ್ನು ಪ್ರತಿನಿಧಿಸುವ ಜಿ೭ ವಿದೇಶಾಂಗ ಮಂತ್ರಿಗಳು ಮತ್ತು ಯುರೋಪಿಯನ್ ಒಕ್ಕೂಟದ ಉನ್ನತ ಪ್ರತಿನಿಧಿ ಜಂಟಿ ಹೇಳಿಕೆಯಲ್ಲಿ, ಉದ್ವಿಗ್ನತೆಯಿಂದ ಪ್ರಭಾವಿತವಾದ ದೇಶಗಳೊಂದಿಗೆ ಒಗ್ಗಟ್ಟನ್ನು ವ್ಯಕ್ತಪಡಿಸಿದ್ದು, ಟೆಹ್ರಾನ್ ತನ್ನ ಮಿಲಿಟರಿ ಚಟುವಟಿಕೆಗಳನ್ನು ತಕ್ಷಣವೇ ನಿಲ್ಲಿಸುವಂತೆ ಒತ್ತಾಯಿಸಿವೆ. ನಿರ್ಣಾಯಕ ಸಮುದ್ರ ಮಾರ್ಗಗಳು ಮತ್ತು ಜಾಗತಿಕ ಪೂರೈಕೆ ಸರಪಳಿಗಳ ಸುರಕ್ಷತೆಯನ್ನು ಖಾತರಿಪಡಿಸುವ ಮಹತ್ವವನ್ನು ಜಿ೭ ಗುಂಪು ಒತ್ತಿ ಹೇಳಿದೆ. ವಿಶೇಷವಾಗಿ ಕಾರ್ಯತಂತ್ರದ ಪ್ರಮುಖವಾದ ಹಾರ್ಮುಜ್ ಜಲಸಂಧಿಯಲ್ಲಿ. ಜಾಗತಿಕ ಇಂಧನ ಪೂರೈಕೆಯನ್ನು ಬೆಂಬಲಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ತಾವು ಸಿದ್ಧರಿದ್ದೇವೆ ಎಂದು ಜಿ೭ ವಿದೇಶಾಂಗ ಸಚಿವರು ಹೇಳಿದ್ದಾರೆ.

<><><><>

ದೇಶದ ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಹಾಗೂ ಆರು ರಾಜ್ಯಗಳಲ್ಲಿ ನಡೆಯಲಿರುವ ಉಪಚುನಾವಣೆ ಸಂದರ್ಭದಲ್ಲಿ ಮತದಾರರಿಗೆ ಅನುಕೂಲವಾಗುವಂತೆ ಕನಿಷ್ಠ ಮೂಲಸೌಕರ್ಯ ಖಾತರಿಪಡಿಸಬೇಕೆಂದು ಚುನಾವಣಾ ಆಯೋಗ ಸಂಬಂಧಪಟ್ಟ ಮುಖ್ಯ ಚುನಾವಣಾಧಿಕಾರಿಗಳಿಗೆ ನಿರ್ದೇಶನ ನೀಡಿದೆ. ಕುಡಿಯುವ ನೀರು, ನೆರಳಿನ ಸೌಲಭ್ಯ, ನೀರಿನ ಸೌಕರ್ಯ ಇರುವ ಶೌಚಾಲಯ ವ್ಯವಸ್ಥೆ, ಸೂಕ್ತ ಬೆಳಕಿನ ವ್ಯವಸ್ಥೆ, ವಿಶೇಷ ಚೇತನ ಮತದಾರರಿಗೆ ರ್‍ಯಾಂಪ್ ವ್ಯವಸ್ಥೆ ಕಲ್ಪಿಸುವಂತೆ ಚುನಾವಣಾ ಆಯೋಗ ಸೂಚಿಸಿದೆ.

<><><><>

ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಹೆಚ್ಚುವರಿಯಾಗಿ ಶೇಕಡ ೨೦ ರಷ್ಟು ವಾಣಿಜ್ಯ ಎಲ್‌ಪಿಜಿ ಹಂಚಿಕೆ ಮಾಡಲು ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದೆ. ಇದರಿಂದಾಗಿ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಹಂಚಿಕೆಯಾಗುವ ವಾಣಿಜ್ಯ ಬಳಕೆ ಎಲ್‌ಪಿಜಿ ಪ್ರಮಾಣವು ಶೇಕಡಾ ೫೦ ಕ್ಕೆ ಏರಿಕೆಯಾಗಿದೆ.

<><><>

ಇಂದು ವಿಶ್ವ ಜಲದಿನ. ನೀರಿನ ಪ್ರಾಮುಖ್ಯತೆ ಮತ್ತು ಜಲ ಸಂರಕ್ಷಣೆ ಬಗ್ಗೆ, ಜಾಗೃತಿ ಮೂಡಿಸಲು, ೧೯೯೩ರಿಂದ ಪ್ರತಿ ವರ್ಷ ಮಾರ್ಚ್ ೨೨ ರಂದು, ವಿಶ್ವ ಜಲ ದಿನವನ್ನಾಗಿ ಆಚರಿಸಲಾಗುತ್ತದೆ. ೨೦೩೦ರ ವೇಳೆಗೆ, ಎಲ್ಲರಿಗೂ ಶುದ್ಧ ಕುಡಿಯುವ ನೀರು ಮತ್ತು ನೈರ್ಮಲ್ಯವನ್ನು ಖಚಿತಪಡಿಸಿಕೊಳ್ಳುವ, ವಿಶ್ವ ಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿ ೬ ರ ಕಡೆಗೆ ಜಾಗತಿಕ ಪಯಣದಲ್ಲಿ ೨೦೨೬ ನಿರ್ಣಾಯಕ ಘಟ್ಟವಾಗಿದೆ. ನೀರು ಹರಿಯುವ ಸ್ಥಳದಲ್ಲಿ ಸಮಾನತೆ ಬೆಳೆಯುತ್ತದೆ ಎಂಬ ಘೋಷ ವಾಕ್ಯದೊಂದಿಗೆ, ವಿಶ್ವ ಜಲ ದಿನದಂದು, ಜನ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ವಿಶ್ವ ಜಲ ದಿನದ ಸಂದರ್ಭದಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು ನಾಗರಿಕರು ಪ್ರತಿ ಹನಿ ನೀರನ್ನು ಸಂರಕ್ಷಿಸುವ ಮತ್ತು ಅದರ ಜವಾಬ್ದಾರಿಯುತ ಬಳಕೆಯನ್ನು ಖಚಿತಪಡಿಸಿಕೊಳ್ಳುವ ಬದ್ಧತೆಯನ್ನು ಪುನರುಚ್ಚರಿಸುವಂತೆ ಕರೆ ನೀಡಿದ್ದಾರೆ.ಈ ಕುರಿತು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ನೀರು ಜೀವ ರಕ್ಷಕವಾಗಿದ್ದು, ಭೂ ಗ್ರಹದ ಭವಿಷ್ಯವನ್ನು ರೂಪಿಸುತ್ತದೆ. ನೀರನ್ನು ಸಂರಕ್ಷಿಸಲು ಮತ್ತು ಅದನ್ನು ಜವಾಬ್ದಾರಿಯುತವಾಗಿ ಬಳಸುವಂತೆ ಹೇಳಿದ್ದಾರೆ. ಸುಸ್ಥಿರ ಅಭ್ಯಾಸಗಳಲ್ಲಿ ತೊಡಗಿರುವ, ಜಾಗೃತಿ ಮೂಡಿಸುವ ಮತ್ತು ಜಲ ಸಂರಕ್ಷಣೆಯ ಸಂಸ್ಕೃತಿಯನ್ನು ಪೋಷಿಸುವವರನ್ನು ಈ ಸಂದರ್ಭದಲ್ಲಿ ಪ್ರಧಾನಿ ಶ್ಲಾಘಿಸಿದ್ದಾರೆ.

<><><>

ಸ್ಕ್ವಾಷ್‌ನಲ್ಲಿ, ಅಭಯ್ ಸಿಂಗ್ ಮತ್ತು ವೀರ್ ಚೋತ್ರಾನಿ ಪ್ರತ್ಯೇಕ ಸೆಮಿಫೈನಲ್‌ಗಳಲ್ಲಿ ಜಯಗಳಿಸಿ ಫೈನಲ್‌ಗೆ ಮುನ್ನಡೆದ ನಂತರ ಭಾರತವು, ಇಂಡಿಯನ್ ಓಪನ್ ೨೦೨೬ ರ ಪುರುಷರ ಸಿಂಗಲ್ಸ್ ಪ್ರಶಸ್ತಿಯನ್ನು ಖಚಿತಪಡಿಸಿಕೊಂಡಿದೆ. ಮುಂಬೈನಲ್ಲಿಂದು ನಡೆಯಲಿರುವ ಫೈನಲ್ ಪಂದ್ಯದಲ್ಲಿ ವೀರ್ ಚೋತ್ರಾನಿ, ಭಾರತದವರೇ ಆದ ಅಭಯ್ ಸಿಂಗ್ ಅವರನ್ನು ಎದುರಿಸಲಿದ್ದಾರೆ. ಏತನ್ಮಧ್ಯೆ, ಅಗ್ರ ಶ್ರೇಯಾಂಕಿತ ಮತ್ತು ಹಾಲಿ ಚಾಂಪಿಯನ್ ಅನಹತ್ ಸಿಂಗ್ ಇಂದು ಸಂಜೆ ಮುಂಬೈನಲ್ಲಿ

ನಡೆಯಲಿರುವ ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ಈಜಿಪ್ಟ್‌ನ ಎರಡನೇ ಶ್ರೇಯಾಂಕಿತ ಹನಾ ಮೋತಾಜ್ ಅವರನ್ನು ಎದುರಿಸಲಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>